# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (453) 284 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ |
| ವಿಷಯ | : | ರೈತರ ಆತ್ಮಹತ್ಯೆ |
| ಉತ್ತರಿಸಬೇಕಾದ ದಿನಾಂಕ | : | 23/9/2020 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಪ್ರಶ್ನೆ | | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು; [ಜಿಲ್ಲಾವಾರು ಮಾಹಿತಿ ನೀಡುವುದು] | ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 2018-19ರಲ್ಲಿ 861 ಹಾಗೂ 2019-20ರಲ್ಲಿ 660 ಪ್ರಕರಣಗಳು. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 1 A, B ರಲ್ಲಿ ನೀಡಲಾಗಿದೆ. |
| ಆ) | ಈವರೆಗೆ ವಿತರಿಸಿರುವ ಪರಿಹಾರ ಧನವೆಷ್ಟು; ಹಾಗೂ ಬಾಕಿ ಇರುವ ಪ್ರಕರಣಗಳೆಷ್ಟು; [ಜಿಲ್ಲಾವಾರು ಮಾಹಿತಿ ನೀಡುವುದು] | ಪರಿಹಾರ ಧನ ವಿತರಿಸಿರುವ ಮೊತ್ತ (ರೂ.ಲಕ್ಷಗಳಲ್ಲಿ)<br>ಕ್ರ.ಸಂ. / ವರ್ಷ / ಮೊತ್ತ / ಬಾಕಿ ಇರುವ ಪ್ರಕರಣಗಳು<br>1 / 2018-19 / 4305 / 0<br>2 / 2019-20 / 285.5 / 127<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 1 A, B ರಲ್ಲಿ ನೀಡಲಾಗಿದೆ. |
| ಇ) | ರೈತರ ಆತ್ಮಹತ್ಯೆ ವರ್ಷವಾರು ಹೆಚ್ಚಾಗುತ್ತಿರುವುದಕ್ಕೆ ಕಾರಣಗಳೇನು; [ಮಾಹಿತಿ ನೀಡುವುದು)] | ವರ್ಷಾವಾರು ಹೆಚ್ಚಾಗುವುದಿಲ್ಲ. |
| ಈ) | ರೈತರ ಆತ್ಮಹತ್ಯೆ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರೈತರ ಆತ್ಮಹತ್ಯೆ ಕುರಿತು ಅಧ್ಯಯನ ನಡೆಸಲು ಸರ್ಕಾರವು 2001ರಲ್ಲಿ ಡಾ\|\| ಜಿ.ಕೆ. ವೀರೇಶ್, ನಿವೃತ್ತ ಕುಲಪತಿಗಳು, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಸದರಿ ಸಮಿತಿಯು ರೈತರ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಮತ್ತು ಸಾಂಸಾರಿಕ ಸಮಸ್ಯೆಗಳು, ಸಾಮರ್ಥ್ಯಕ್ಕೆ ಮೀರಿ ಸಾಲ, ಬೆಳೆ ನಷ್ಟ ಇವೇ ಮುಂತಾದವು ರೈತರ ಆತ್ಮಹತ್ಯೆಗೆ ಕಾರಣಗಳಾಗಿರುತ್ತವೆಂದು ವರದಿ ನೀಡಿರುತ್ತದೆ.<br>ರೈತರ ಆತ್ಮಹತ್ಯೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ರಚಿಸಿರುವ ಉಪವಿಭಾಗ ಮಟ್ಟದ ಸಮಿತಿಯಲ್ಲಿ ಉಪ ವಿಭಾಗಾಧಿಕಾರಿಗಳು ಕಂದಾಯ ಇಲಾಖೆ ಅಧ್ಯಕ್ಷರಾಗಿದ್ದು, ಆಯಾ ತಾಲ್ಲೂಕಿನ ತಹಶೀಲ್ದಾರ್ ಸದಸ್ಯರು, ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ಸದಸ್ಯರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಸದಸ್ಯರು ಹಾಗೂ ಆಯಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು, ಸದಸ್ಯ ಕಾರ್ಯದರ್ಶಿ ಅವಶ್ಯತೆಗನುಗುಣವಾಗಿ ಸಮಿತಿಯ ಅಧ್ಯಕ್ಷರು ಇತರೆ ಸದಸ್ಯರುಗಳನ್ನು ನೇಮಿಸಿಕೊಳ್ಳುವ ಅಧಿಕಾರ ಹೊಂದಿರುತ್ತಾರೆ.<br>ರೈತರ ಆತ್ಮಹತ್ಯೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ಉಪವಿಭಾಗ ಮಟ್ಟದ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರವು ರಚಿಸಿರುವ ಸಮಿತಿಯಲ್ಲಿ ಅರ್ಜಿದಾರರು ಸಲ್ಲಿಸುವ ಮೃತ ರೈತರ ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ಪ್ರಕರಣಗಳೆಂದು ಸರ್ವಾನುಮತದಿಂದ ತೀರ್ಮಾನಿಸಲಾಗುವ ಪ್ರತಿ ಅರ್ಹ ಪ್ರಕರಣಗಳಿಗೆ ತಲಾ ರೂ.5.00 ಲಕ್ಷದಂತೆ ಪರಿಹಾರಧನವನ್ನು ಮೃತ ರೈತರ ಕಾನೂನು ಬದ್ಧ ವಾರಸುದಾರರಿಗೆ ವಿತರಿಸಲಾಗುತ್ತಿದೆ.<br>ರೈತರ ಆತ್ಮಹತ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ರೈತರ ಶ್ರೇಯೋಭಿವೃದ್ಧಿಗಾಗಿ ವೈಜ್ಞಾನಿಕವಾಗಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವ ತರಬೇತಿಯನ್ನು ಹಾಗೂ ಅವರಲ್ಲಿ ಆತ್ಮಸ್ಥೈರ್ಯ ತುಂಬಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ್ಯೂ ಸಹ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿವೆ. ರೈತರ ಆತ್ಮಹತ್ಯೆ ತಡೆಯಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.<br>ಸ್ಥಳೀಯ ಸಾಲಗಾರರಿಂದ ರೈತರ ಶೋಷಣೆ ತಡೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಯೋಜಿಸಿದ್ದು, ಉಸ್ತುವಾರಿಗಾಗಿ ಹಾಗೂ ನಿಗಾ ವಹಿಸಲು ಜಿಲ್ಲಾ ಮಟ್ಟದಲ್ಲಿ ಮತ್ತು ಉಪವಿಭಾಗ ಮಟ್ಟದಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಕೃ.ಇ/55/ಕೃ.ಉ.ಇ/2015 ಬೆಂಗಳೂರು, ದಿನಾಂಕ: 11.07.2015ರನ್ವಯ ಸಮಿತಿಗಳನ್ನು ರಚಿಸಲಾಗಿದೆ. ಸದರಿ |

ಸಮಿತಿಗಳು "The Karnataka Money lenders Act 1961, The Karnataka pawnbrokers Act 1961, The Chitfunds Act 1982 and The Karnataka Prohibition of Charging Exorbitant Interest Act 2004" ಅಡಿ ಇರುವ ನಿಯಂತ್ರಣ ಅವಕಾಶಗಳನ್ನು ಹಾಗೂ ಕಾಯ್ದೆಗಳ ಪರಿಣಾಮಕಾರಿ ಜಾರಿಯನ್ನು ಖಚಿತಪಡಿಸಿಕೊಳ್ಳುತ್ತವೆ.

- ಸ್ಥಳೀಯ ಸಾಲಗಾರರಿಂದ ರೈತರ ಶೋಷಣೆ ತಡೆಯುವ ಕುರಿತು ಉಸ್ತುವಾರಿ/ ನಿಗಾ ವಹಿಸಲು ಜಿಲ್ಲಾ ಮಟ್ಟದಲ್ಲಿ ಮತ್ತು ಉಪವಿಭಾಗ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಜಿಲ್ಲಾ ಮಟ್ಟದ/ ಉಪವಿಭಾಗ ಮಟ್ಟದ ಸಮಿತಿಯಲ್ಲಿ ಕಂದಾಯ, ಪೋಲೀಸ್, ಕೃಷಿ, ತೋಟಗಾರಿಕೆ, ಸಹಕಾರ, ಪಶುಸಂಗೋಪನೆ ಇಲಾಖೆಯ ಅಧಿಕಾರಿಗಳು ಸದಸ್ಯರಿದ್ದು, ದುಬಾರಿ ಬಡ್ಡಿಯಿಂದ ಬಾಧಿತರಾದ ರೈತರನ್ನು ರಕ್ಷಿಸಲು ಕ್ರಮ ವಹಿಸಲಾಗಿದೆ.
- ಬೆಳೆ ವಿಮೆ: ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆಯನ್ನು ಜಾರಿಗೆ ತರಲಾಗಿದೆ. ವಿಮಾ ಕಂತಿನ ಶೇ. 95 ರಿಂದ 98ರಷ್ಟು ಮೊತ್ತವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಪಾವತಿಸಲಾಗುತ್ತಿದೆ. ಇದರಿಂದಾಗಿ ಬೆಳೆ ನಷ್ಟ ಸಂಭವಿಸಿದರೂ ಸಹ ರೂತರಿಗೆ ಪರಿಹಾರ ದೊರೆಯುತ್ತದೆ.
- ಪ್ರಾಕೃತಿಕ ವಿಕೋಪಗಳಿಂದ ಬೆಳೆಹಾನಿ ಸಂಭವಿಸಿದಲ್ಲಿ ರಾಷ್ಟ್ರ ಹಾಗೂ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೈತರಿಗೆ ಪರಿಹಾರ ನೀಡಲಾಗುತ್ತಿದೆ.
- ಕೃಷಿ ಆವರ್ತ ನಿಧಿ: ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಬೆಲೆ ಕುಸಿತವಾದಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಆವರ್ತ ನಿಧಿಯನ್ನು ನಿರ್ವಹಿಸಲಾಗುತ್ತಿದೆ.
- ರೈತರ ಹಿತ ಕಾಪಾಡಲು ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾದ ಸಂಧರ್ಭದಲ್ಲಿ ಮಾರುಕಟ್ಟೆ ಬೆಲೆಯು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಾದಾಗ ಸರ್ಕಾರವು ಮಧ್ಯ ಪ್ರವೇಶಿಸಿ ರೈತರ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆಯಡಿ ಖರೀದಿಸುತ್ತದೆ.
- ರೈತರಿಗೆ ನೇರವಾಗಿ ಸಹಕಾರ ಸಂಘಗಳಿಂದ ಸಾಲದ ನೆರವು: ಶೂನ್ಯ ಬಡ್ಡಿಯಲ್ಲಿ ರೂ.3.00 ಲಕ್ಷದವರೆಗೆ ಮತ್ತು ಶೇ.3ರ ಬಡ್ಡಿಯಲ್ಲಿ ರೂ. 10.00 ಲಕ್ಷದವರೆಗೆ ರೈತರಿಗೆ ಸಾಲ ನೀಡುವ ಕ್ರಮವನ್ನು ರಾಜ್ಯ ಸರ್ಕಾರವು 2014-15ನೇ ಸಾಲಿನಿಂದ ಕೈಗೊಂಡಿರುತ್ತದೆ.
- ರಾಜ್ಯದಲ್ಲಿ 2009-10ನೇ ಸಾಲಿನಿಂದ ಬೆಳೆ ಸಾಲಕ್ಕೆ ಸಹಾಯಧನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2012-13ನೇ ಸಾಲಿನಿಂದ ಶೇ.1ರ ಬಡ್ಡಿ ರಿಯಾಯಿತಿ ಮಿತಿಯನ್ನು ರೂ. 50,000/- ರಿಂದ ರೂ. 1,00,000/-ದವರೆಗೆ ಹೆಚ್ಚಿಸಲಾಗಿರುತ್ತದೆ.
- ರಾಜ್ಯದಲ್ಲಿ ಮಳೆಯಾಶ್ರಿತ ರೈತ ಸಮುದಾಯದ ಜೀವನೋಪಾಯವನ್ನು ಉತ್ತಮಪಡಿಸಲು ಕೃಷಿ ಭಾಗ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಮಳೆ ನೀರಿನ ಸಂಗ್ರಹಣೆ, ಸಂರಕ್ಷಣೆ ಹಾಗೂ ಉಪಯುಕ್ತ ಬಳಕೆ, ಲಾಭದಾಯಕ ಬೆಳೆ ಪದ್ಧತಿ ಅಳವಡಿಕೆ, ಉತ್ತಮ ಆದಾಯ ತರುವ ತೋಟಗಾರಿಕೆ ಬೆಳೆಗಳು, ಪಶು ಸಂಗೋಪನಾ ಚಟುವಟಿಕೆಗಳು, ಕೃಷಿ ವಲಯಕ್ಕೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲು ಉದ್ದೇಶಿಸಲಾಗಿದೆ. ಕೃಷಿ ಭಾಗ್ಯ ಯೋಜನೆಯನ್ನು ಅಭಿಯಾನ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗಿತ್ತಿದೆ.
- ಸಕಾಲದಲ್ಲಿ ಕೃಷಿ ಕಾರ್ಯಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಸರ್ಕಾರದಿಂದ ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಉಪಕರಣದ ಕನಿಷ್ಠ ದರದ ಶೇ.50ರಷ್ಟು ರಿಯಾಯಿತಿ ಮತ್ತು ಪ.ಜಾ/ಪ.ಪಂ ವರ್ಗದ ರೈತರಿಗೆ ಶೇ. 90 ರಷ್ಟು ಗರಿಷ್ಠ ಮಿತಿ ರೂ. 1.00 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ.
- ರೈತರಿಗೆ ಸಕಾಲದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವ ಸಲುವಾಗಿ ಪ್ರತಿ ಹೋಬಳಿ ಕೇಂದ್ರದಲ್ಲಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ನೊಂದಾಯಿತ ಚಾರಿಟಬಲ್ ಟ್ರಸ್ಟ್ ಗಳು/ಸಂಘ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಸ್ಥಾಪಿಸಲು ಕ್ರಮ ಕೈಗೊಳ್ಳುತ್ತಿದೆ.
- ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ ಉತ್ತೇಜಿಸಿ ಯುವ ರೈತರನ್ನು ಕೃಷಿಯತ್ತ ಗಮನ ಸೆಳೆದು ಉದ್ಯೋಗಾವಕಾಶ ಸೃಜಿಸಲು ಹಾಗೂ ಸ್ಥಳೀಯವಾಗಿ ಕೃಷಿ ಉಪಕರಣಗಳ ದುರಸ್ತಿಗಾಗಿ ಹಾಗೂ ಲಘು ಉಪಕರಣಗಳ ತಯಾರಿಕೆಗಾಗಿ "ಗ್ರಾಮೀಣ ಕೃಷಿ ಯಂತ್ರೋಪಕರಣ ದುರಸ್ತಿ ಸೇವಾ ಕೇಂದ್ರ ಸ್ಥಾಪನೆ ಮಾಡಲಾಗಿದೆ.
- ಕೃಷಿ ಮತ್ತು ಎಲ್ಲಾ ಅಭಿವೃದ್ಧಿ ಇಲಾಖೆಗಳಿಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ರೈತರಿಗೆ ಅರಿವು ಮೂಡಿಸಲು ಹಾಗೂ ತಾಂತ್ರಿಕತೆಗಳನ್ನು ವರ್ಗಾಹಿಸಲು ಒಂದು ಏಕ ಗವಾಕ್ಷಿ ವ್ಯವಸ್ಥೆಯಾಗಿ ಕೃಷಿ ಅಭಿಯಾನ ಯೋಜನೆಯನ್ನು ಮುಂಗಾರು 2015ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.
- ರಾಜ್ಯಾದ್ಯಂತ ಕೃಷಿ ಚಟುವಟಿಕೆಗಳಿಗೆ ಸಹಾಯವಾಗುವಂತೆ ಸೂಕ್ಷ್ಮ ನೀರಾವರಿ ಘಟಕಗಳನ್ನು ಕಡಿಮೆ ವೆಚ್ಚದಲ್ಲಿ ಎಲ್ಲಾ ವರ್ಗದ ರೈತರಿಗೆ ಅದರಲ್ಲೂ ಸಣ್ಣ ಮತ್ತು ಅತಿಸಣ್ಣ ರೈತರು ಶಕ್ತ ವೆಚ್ಚದಲ್ಲಿ ಪಡೆಯುವಂತೆ

| | | |
|---|---|---|
| | | ಮಾಡಲು ಲಭ್ಯವಿರುವ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಮತ್ತು ಹೆಚ್ಚಿನ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಗಳಿಸಲು ರೈತರಿಗೆ ಹನಿ ನೀರಾವರಿ, ತುಂತುರು ನೀರಾವರಿ/ರೇನ್ ಗನ್ ಘಟಕಗಳ ಶೇ.90 ರಷ್ಟು ರಿಯಾಯಿತಿಯಲ್ಲಿ ವಿತರಣೆ ಮಾಡಲಾಗುತ್ತಿದೆ.<br><br>ಸಾವಯವ ಕೃಷಿ ಉತ್ತೇಜಿಸಲು ರಾಜ್ಯ ಸರ್ಕಾರವು 2004-05ರಿಂದ ಸಾವಯವ ಕೃಷಿ ನೀತಿಯನ್ನು ಜಾರಿಗೆ ತಂದಿರುತ್ತದೆ. ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸಲು ಹಾಗೂ ವ್ಯವಸ್ಥಿತ ಮಾರುಕಟ್ಟೆ ಅಭಿವೃದ್ಧಿ ಕಾರ್ಯಕ್ರಮಗಳನ್ನೊಳಗೊಂಡ ಸಾವಯವ ಉತ್ಪನ್ನಗಳಿಗೆ ಭಾಗ್ಯ ಯೋಜನೆಯನ್ನು 2013-14ನೇ ಸಾಲಿನಿಂದ ಜಾರಿಗೆ ತರಲಾಗಿದೆ. ಇದಕ್ಕೆ ಪೂರಕವಾಗಿ ರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು ಕೃಷಿ ಇಲಾಖೆವತಿಯಿಂದ ಆಯೋಜಿಸಲಾಗಿರುತ್ತದೆ. ಜನವರಿ 2019ರ ಮಾಹೆಯಲ್ಲಿ ಅಂತರರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯಗಳ ವಾಣಿಜ್ಯ ಮೇಳವನ್ನು ಏರ್ಪಡಿಸಲಾಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ರೈತರು ಭಾಗವಹಿಸಿದ್ದು, ಮುಖ್ಯವಾಗಿ ಸಿರಿಧಾನ್ಯಗಳ ಮಹತ್ವದ ಬಗ್ಗೆ, ಸಂಸ್ಕರಣೆ, ಮಾರುಕಟ್ಟೆ ಇತ್ಯಾದಿಗಳ ಬಗ್ಗೆ ಪೂರಕವಾಗಿ ಮಾಹಿತಿಯನ್ನು ನೀಡಲಾಗಿದೆ.<br><br>**ವಿಶೇಷ ಸೌಲಭ್ಯ:** ಆತ್ಮಹತ್ಯೆ ಮಾಡಿಕೊಂಡ ಅರ್ಹ ಪ್ರಕರಣಗಳ ರೈತರ ಪತ್ನಿಯರಿಗೆ ರೂ.2000/-ಗಳ ವಿಧವಾ ಮಾಶಾಸನವನ್ನು ಕಂದಾಯ ಇಲಾಖೆಯಿಂದ ನೀಡಲಾಗುತ್ತಿದೆ. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಸ್ನಾತಕೋತ್ತರ ಪದವಿಯ ಹಂತದವರೆಗೆ ಶಿಕ್ಷಣವನ್ನು ಮುಂದುವರೆಸಲು ಅನುವಾಗುವಂತೆ ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಮತ್ತು ವಸತಿ ವೆಚ್ಚದ ಮರುಪಾವತಿ ಮಾಡುವಂತೆ ಅನುಕೂಲ ಕಲ್ಪಿಸಲಾಗುತ್ತಿದೆ ಎಂಬ ಮಾಹಿತಿಯನ್ನು ತಮ್ಮ ಗಮನಕ್ಕೆ ತರಬಯಸಲಾಗಿದೆ.<br>**ಪಿ.ಎಂ. ಕಿಸಾನ್ ಯೋಜನೆ:**<br>ಭಾರತ ಸರ್ಕಾರದ ಪಿ.ಎಂ. ಕಿಸಾನ್ ಯೋಜನೆಯಡಿ ರಾಜ್ಯದ 52,68,327 ರೈತರಿಗೆ ಆರ್ಥಿಕ ನೆರವು ವರ್ಗಾವಣೆಯಾಗಿದ್ದು, ವಿವಿಧ ಕಂತುಗಳಲ್ಲಿ (1 ರಿಂದ 6 ನೇ ಕಂತು) ಒಟ್ಟಾರೆ 4853.03 ಕೋಟಿ ರೂ. ಆರ್ಥಿಕ ನೆರವು ವರ್ಗಾವಣೆಯಾಗಿರುತ್ತದೆ.<br>2020-21ನೇ ಸಾಲಿನ ಪ್ರಥಮ ತ್ರೈಮಾಸಿಕದಲ್ಲಿ 51,36,220 ರೈತರಿಗೆ ರೂ.2000/- ದಂತೆ ಒಟ್ಟು ರೂ.1027.24 ಕೋಟಿ ಆರ್ಥಿಕ ನೆರವು ವರ್ಗಾವಣೆಯಾಗಿರುತ್ತದೆ.<br>2020-21ನೇ ಸಾಲಿನ ದ್ವಿತೀಯ ತ್ರೈಮಾಸಿಕದಲ್ಲಿ 50,71,303 ರೈತರಿಗೆ ರೂ.2000/- ದಂತೆ ಒಟ್ಟು ರೂ.1014.26 ಕೋಟಿ ಆರ್ಥಿಕ ನೆರವು ವರ್ಗಾವಣೆಯಾಗಿರುತ್ತದೆ. |

ಸಂಖ್ಯೆ : ಡಿಎಸ್‌ಎಸ್‌ಪಿ - ಎಲ್‌ಸಿಕ್ಯೂ 14/2020

[ಆರ್. ಅಶೋಕ],
ಕಂದಾಯ ಸಚಿವರು

## ಅನುಬಂಧ-1 (A)

## 2019-20 ರೈತರ ಆತ್ಮಹತ್ಯೆ ವರದಿ

| ಕ್ರ.ಸಂ. | ಜಿಲ್ಲೆ | ವರದಿಯಾದ ಪ್ರಕರಣಗಳು | ತಿರಸ್ಕೃತ ಪ್ರಕರಣಗಳು | ಅರ್ಹ ಪ್ರಕರಣಗಳು | ಪರಿಹಾರ ಧನ ನೀಡಿರುವ ಪ್ರಕರಣಗಳು | ಪರಿಹಾರ ನೀಡಬೇಕಾಗಿರುವ ಪ್ರಕರಣಗಳು | ತೀರ್ಮಾನಿಸಲು ಬಾಕಿ ಇರುವ ಪ್ರಕರಣಗಳು | ಎಫ್.ಎಸ್.ಎಲ್. ವರದಿಗಾಗಿ | ಇತರೆ ದಾಖಲಾತಿಗಾಗಿ ಬಾಕಿ ಇರುವ ಪ್ರಕರಣಗಳು |
|---|---|---|---|---|---|---|---|---|---|
| | | 1 | 2 | 3 | 4 | 5 | 6 | 7 | 8 |
| 1 | ಬಾಗಲಕೋಟೆ | 28 | 1 | 23 | 20 | 3 | 4 | 0 | 4 |
| 2 | ಬಳ್ಳಾರಿ | 35 | 1 | 34 | 31 | 3 | 0 | 0 | 0 |
| 3 | ಬೆಂ.ಗ್ರಾಮಾಂತರ | 1 | 1 | 0 | 0 | 0 | 0 | 0 | 0 |
| 4 | ಬೆಂ.ನಗರ | 1 | 0 | 1 | 1 | 0 | 1 | 0 | 0 |
| 5 | ಬೆಳಗಾವಿ | 94 | 18 | 67 | 67 | 0 | 9 | 0 | 9 |
| 6 | ಬೀದರ್ | 46 | 0 | 32 | 32 | 0 | 6 | 6 | 0 |
| 7 | ಚಾಮರಾಜನಗರ | 1 | 0 | 1 | 1 | 0 | 0 | 0 | 0 |
| 8 | ಚಿಕ್ಕಬಳ್ಳಾಪುರ | 2 | 0 | 2 | 2 | 0 | 0 | 0 | 0 |
| 9 | ಚಿಕ್ಕಮಗಳೂರು | 41 | 4 | 34 | 32 | 2 | 3 | 0 | 3 |
| 10 | ಚಿತ್ರದುರ್ಗ | 40 | 3 | 37 | 37 | 0 | 0 | 0 | 0 |
| 11 | ದ.ಕನ್ನಡ | 3 | 0 | 3 | 3 | 0 | 0 | 0 | 0 |
| 12 | ದಾವಣಗೆರೆ | 36 | 15 | 20 | 12 | 8 | 1 | 0 | 1 |
| 13 | ಧಾರವಾಡ | 60 | 18 | 35 | 35 | 0 | 7 | 0 | 7 |
| 14 | ಗದಗ | 25 | 9 | 11 | 6 | 5 | 5 | 2 | 3 |
| 15 | ಹಾಸನ | 33 | 5 | 28 | 28 | 0 | 0 | 0 | 0 |
| 16 | ಹಾವೇರಿ | 76 | 6 | 58 | 39 | 19 | 23 | 0 | 23 |
| 17 | ಕಲಬುರಗಿ | 58 | 0 | 33 | 33 | 0 | 22 | 9 | 6 |
| 18 | ಕೊಡಗು | 9 | 0 | 9 | 9 | 0 | 0 | 0 | 0 |
| 19 | ಕೋಲಾರ | 4 | 0 | 4 | 4 | 0 | 0 | 0 | 0 |
| 20 | ಕೊಪ್ಪಳ | 23 | 0 | 23 | 23 | 0 | 0 | 0 | 0 |
| 21 | ಮಂಡ್ಯ | 63 | 6 | 50 | 28 | 22 | 7 | 7 | 0 |
| 22 | ಮೈಸೂರು | 60 | 11 | 42 | 30 | 12 | 7 | 0 | 7 |
| 23 | ರಾಯಚೂರು | 22 | 10 | 9 | 8 | 1 | 3 | 3 | 0 |
| 24 | ರಾಮನಗರ | 5 | 0 | 2 | 2 | 0 | 3 | 0 | 3 |
| 25 | ಶಿವಮೊಗ್ಗ | 42 | 6 | 25 | 20 | 5 | 11 | 10 | 1 |
| 26 | ತುಮಕೂರು | 31 | 3 | 25 | 16 | 9 | 3 | 0 | 3 |
| 27 | ಉಡುಪಿ | 1 | 0 | 0 | 0 | 0 | 1 | 0 | 1 |
| 28 | ಉ.ಕನ್ನಡ | 5 | 0 | 3 | 3 | 0 | 2 | 0 | 2 |
| 29 | ವಿಜಯಪುರ | 43 | 3 | 35 | 35 | 0 | 5 | 5 | 0 |
| 30 | ಯಾದಗಿರಿ | 20 | 2 | 14 | 14 | 0 | 4 | 0 | 4 |
| | ಒಟ್ಟು | 908 | 122 | 660 | 571 | 89 | 127 | 42 | 77 |

1. ವರದಿಯಾದ ಪ್ರಕರಣಗಳು, 2. ತಿರಸ್ಕೃತ ಪ್ರಕರಣಗಳು, 3. ಅರ್ಹ ಪ್ರಕರಣಗಳು, 4. ಪರಿಹಾರ ಧನ ನೀಡಿರುವ ಪ್ರಕರಣಗಳು, 5. ಪರಿಹಾರ ನೀಡಬೇಕಾಗಿರುವ ಪ್ರಕರಣಗಳು, 6. ತೀರ್ಮಾನಿಸಲು ಬಾಕಿ ಇರುವ ಪ್ರಕರಣಗಳು, 7. ಎಫ್.ಎಸ್.ಎಲ್. ವರದಿಗಾಗಿ, 8. ಇತರೆ ದಾಖಲಾತಿಗಾಗಿ ಬಾಕಿ ಇರುವ ಪ್ರಕರಣಗಳು.

*ಪ್ರತಿ ಪ್ರಕರಣಗಳಿಗೆ ರೂ.5.00 ಲಕ್ಷದಂತೆ, ಒಟ್ಟು ರೂ.285.5 ಲಕ್ಷಗಳನ್ನು ವಿತರಿಸಲಾಗಿರುತ್ತದೆ.

ಕೃಷಿ ನಿರ್ದೇಶಕರು

## ಅನುಬಂಧ-1 (B)

## 2020-21 ರೈತರ ಆತ್ಮಹತ್ಯೆ ವರದಿ

| ಕ್ರ.ಸಂ. | ಜಿಲ್ಲೆ | ವರದಿಯಾದ ಪ್ರಕರಣಗಳು | ತಿರಸ್ಕೃತ ಪ್ರಕರಣಗಳು | ಅರ್ಹ ಪ್ರಕರಣಗಳು | ಪರಿಹಾರ ಧನ ನೀಡಿರುವ ಪ್ರಕರಣಗಳು | ಪರಿಹಾರ ನೀಡಬೇಕಾಗಿರುವ ಪ್ರಕರಣಗಳು | ತೀರ್ಮಾನಿಸಲು ಬಾಕಿ ಇರುವ ಪ್ರಕರಣಗಳು | ಎಫ್.ಎಸ್.ಎಲ್. ವರದಿಗಾಗಿ | ಇತರೆ ದಾಖಲಾತಿಗಾಗಿ ಬಾಕಿ ಇರುವ ಪ್ರಕರಣಗಳು |
|---|---|---|---|---|---|---|---|---|---|
| | | 1 | 2 | 3 | 4 | 5 | 6 | 7 | 8 |
| 1 | ಬಾಗಲಕೋಟೆ | 9 | 0 | 2 | 0 | 2 | 7 | 2 | 5 |
| 2 | ಬಳ್ಳಾರಿ | 4 | 0 | 0 | 0 | 0 | 4 | 0 | 4 |
| 3 | ಬೆಂ.ಗ್ರಾಮಾಂತರ | 4 | 0 | 4 | 0 | 4 | 0 | 0 | 0 |
| 4 | ಬೆಂ.ನಗರ | 2 | 0 | 2 | 0 | 0 | 0 | 0 | 0 |
| 5 | ಬೆಳಗಾವಿ | 13 | 0 | 3 | 0 | 0 | 10 | 0 | 10 |
| 6 | ಬೀದರ್ | 3 | 0 | 0 | 0 | 0 | 3 | 0 | 3 |
| 7 | ಚಾಮರಾಜನಗರ | 0 | 0 | 0 | 0 | 0 | 0 | 0 | 0 |
| 8 | ಚಿಕ್ಕಬಳ್ಳಾಪುರ | 7 | 0 | 0 | 0 | 0 | 7 | 0 | 7 |
| 9 | ಚಿಕ್ಕಮಗಳೂರು | 15 | 0 | 3 | 0 | 0 | 12 | 0 | 12 |
| 10 | ಚಿತ್ರದುರ್ಗ | 14 | 1 | 3 | 0 | 0 | 10 | 0 | 10 |
| 11 | ದ.ಕನ್ನಡ | 0 | 0 | 0 | 0 | 0 | 0 | 0 | 0 |
| 12 | ದಾವಣಗೆರೆ | 7 | 0 | 2 | 0 | 0 | 5 | 0 | 5 |
| 13 | ದಾರವಾಡ | 7 | 0 | 4 | 0 | 4 | 3 | 1 | 2 |
| 14 | ಗದಗ | 5 | 1 | 1 | 0 | 0 | 3 | 0 | 3 |
| 15 | ಹಾಸನ | 11 | 1 | 10 | 0 | 10 | 0 | 0 | 0 |
| 16 | ಹಾವೇರಿ | 5 | 0 | 0 | 0 | 0 | 5 | 0 | 5 |
| 17 | ಕಲಬುರಗಿ | 13 | 0 | 8 | 0 | 0 | 5 | 0 | 5 |
| 18 | ಕೊಡಗು | 2 | 0 | 2 | 0 | 2 | 0 | 0 | 0 |
| 19 | ಕೋಲಾರ | 3 | 0 | 3 | 0 | 3 | 0 | 0 | 0 |
| 20 | ಕೊಪ್ಪಳ | 4 | 0 | 2 | 0 | 2 | 2 | 0 | 2 |
| 21 | ಮಂಡ್ಯ | 8 | 0 | 3 | 0 | 0 | 5 | 3 | 2 |
| 22 | ಮೈಸೂರು | 12 | 3 | 5 | 0 | 5 | 4 | 0 | 4 |
| 23 | ರಾಯಚೂರು | 9 | 2 | 3 | 0 | 0 | 4 | 3 | 1 |
| 24 | ರಾಮನಗರ | 0 | 0 | 0 | 0 | 0 | 0 | 0 | 0 |
| 25 | ಶಿವಮೊಗ್ಗ | 8 | 0 | 1 | 0 | 0 | 7 | 6 | 1 |
| 26 | ತುಮಕೂರು | 11 | 1 | 1 | 0 | 1 | 9 | 2 | 7 |
| 27 | ಉಡುಪಿ | 2 | 0 | 1 | 0 | 1 | 1 | 0 | 1 |
| 28 | ಉ.ಕನ್ನಡ | 8 | 0 | 4 | 0 | 0 | 4 | 0 | 4 |
| 29 | ವಿಜಯಪುರ | 9 | 0 | 1 | 0 | 1 | 8 | 1 | 7 |
| 30 | ಯಾದಗಿರಿ | 1 | 0 | 0 | 0 | 0 | 1 | 0 | 1 |
| | ಒಟ್ಟು | 196 | 9 | 68 | 0 | 35 | 119 | 18 | 101 |

1. ವರದಿಯಾದ ಪ್ರಕರಣಗಳು, 2. ತಿರಸ್ಕೃತ ಪ್ರಕರಣಗಳು, 3. ಅರ್ಹ ಪ್ರಕರಣಗಳು, 4. ಪರಿಹಾರ ಧನ ನೀಡಿರುವ ಪ್ರಕರಣಗಳು, 5. ಪರಿಹಾರ ನೀಡಬೇಕಾಗಿರುವ ಪ್ರಕರಣಗಳು, 6. ತೀರ್ಮಾನಿಸಲು ಬಾಕಿ ಇರುವ ಪ್ರಕರಣಗಳು, 7. ಎಫ್.ಎಸ್.ಎಲ್. ವರದಿಗಾಗಿ, 8. ಇತರೆ ದಾಖಲಾತಿಗಾಗಿ ಬಾಕಿ ಇರುವ ಪ್ರಕರಣಗಳು. *ಪ್ರತಿ ಪ್ರಕರಣಗಳಿಗೆ 5.00 ಲಕ್ಷದಂತೆ ಪರಿಹಾರ ಧನವನ್ನು ವಿತರಿಸಲಾಗುತ್ತದೆ.

ಕೃಷಿ ನಿರ್ದೇಶಕರು